ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ನಾನ್ ಗೌರ್ನಮೆಂಟ್ ಆರ್ಗನೈಜೇಶನ್ ಕೆಲವು ಕಡೆ ಇರುವುದರಿಂದ ತೊಂದರೆಯಾಗುತ್ತಿದೆ. ಇದು ತಮಗೆ ಗೊತ್ತಿರುವ ಹಾಗೆ ನಾಗರಹೊಳೆಯಲ್ಲಿಯೂ ಸಹ ಇದೆ. ಈ ಜನಾಂಗಕ್ಕೆ ಏನೇನು ಸವಲತ್ತುಗಳನ್ನು ಕೊಡಬೇಕೋ, ಅದನ್ನೆಲ್ಲಾ ಕೊಡುವುದಕ್ಕೆ ಸರ್ಕಾರ ಮುಂದೆ ಬಂದಿದೆ ಮತ್ತು ಅವರನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ರೈತರು ಬೆಳೆದಂಥ ಪದಾರ್ಥಗಳಿಗೆ ಬೆಲೆ ಕಡಿಮೆಯಾಗಿರುವ ಬಗ್ಗೆ

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಉಪಾಧ್ಯಕ್ಷರೆ, ನಾನು ಈ ವಿಷಯವನ್ನು ಗಮನಸೆಳೆಯುವ ಸೂಚನೆಯಲ್ಲಿ ತರಬೇಕೆಂದು ಇದ್ದೆ, ಆದರೆ ಅದು ಸಾಧ್ಯವಾಗಲಿಲ್ಲ. ಇವತ್ತಿನದಿವಸ ರೈತರ ಸಮಸ್ಯೆ ಬಹಳ ಗಂಭೀರವಾಗಿದೆ. ಈ ವರ್ಷ ರೈತರು ಬೆಳೆದಂತಹ ಎಲ್ಲಾ ಪದಾರ್ಥಗಳು ಬಹಳಷ್ಟು ಕಡಿಮೆಯಾಗಿದೆ. ವಿಶೇಷವಾಗಿ ಉತ್ತರ ಭಾಗದಲ್ಲಿ ಬೆಳೆಯುವಂತಹ ಜೋಳ ಇರಬಹುದು ಅಥವಾ ಗೋಧಿ ಇರಬಹುದು, ಹತ್ತಿ ಇರಬಹುದು, ಇವತ್ತು ಬಹುತೇಕ ಕಡಿಮೆಯಾಗಿದೆ. ಕೇಂದ್ರ ಸರ್ಕಾರ ನಿಗಧಿ ಮಾಡಿರುವ ಕನಿಷ್ಠ ಬೆಲೆ ಏನು ಇದೆ ಅದಕ್ಕಿಂತ ಕಡಿಮೆ, ಬಹಳ ಸಮೀಪ ಇವತ್ತು ರೈತರಿಗೆ ನಷ್ಟವಾಗಿದೆ. ರೈತರು ಬೆಳೆಗೆ ಹಾಕಿರತಕ್ಕಂಥ ಗೊಬ್ಬರ ಮತ್ತು ರಸಾಯನಿಕ ಔಷಧಿಗಳ ಖರ್ಚನ್ನು ನೀಗಿಸುವುದಕ್ಕೂ ಇವತ್ತಿನ ದಿವಸ ಅವರಿಗೆ ಆಗುತ್ತಿಲ್ಲ. ಅಷ್ಟೊಂದು ಬೆಳೆ ನಾಶ ಆಗಿದೆ. ಈ ಒಂದು ಸಮಸ್ಯೆ ಸುಮಾರು ಮೂರು ತಿಂಗಳಿಂದಲೂ ಇದೆ. ಮೊನ್ನೆ ದಿವಸ ಈ ಸದನದಲ್ಲಿ ಹತ್ತಿ ಸಮಸ್ಯೆ ಬಗ್ಗೆ ಚರ್ಚೆಗೆ ಬಂದಿತ್ತು. ಮಾರುಕಟ್ಟೆಯಲ್ಲಿ ಹತ್ತಿ ರಾಶಿ ಇದ್ದರೂ ಸಹ ಮಾರಾಟ ಆಗುತ್ತಿಲ್ಲ. ಹಿಂದೆ ಮೂರು ಸಾವಿರ ಅಥವಾ 2,500 ರೂಪಾಯಿ ಹತ್ತಿ ಬೆಲೆ ಇತ್ತು ಇವತ್ತು 1500 ರಿಂದ 1200 ರೂಪಾಯಿಗೂ ಯಾರು ಕೇಳುವಂತಹ ಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇವತ್ತು ಮಲಪ್ರಭ ಮತ್ತು ಘಟಪ್ರಭ ನೀರಾವರಿ ಪ್ರದೇಶದಲ್ಲಿ ಗೋವಿನ ಜೋಳ ಅತೀ ಮುಖ್ಯವಾದ ಬೆಳೆಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ 360 ರೂಪಾಯಿ ಇದ್ದರು, ಈಗ 300 ರೂಪಾಯಿಗೂ ಸಹ ಯಾರು ಕೇಳುತ್ತಿಲ್ಲ. ಹೋದ ವರ್ಷ ಬೆಳೆದಂತಹ ಜೋಳಕ್ಕೆ ಬೆಲೆ ಜಾಸ್ತಿ ಇತ್ತು. ಭತ್ತ, ಹತ್ತಿ ಮತ್ತು ಕಡಲೆ ಬೆಲೆಗಳು ಇವತ್ತು ಬಹಳ ಕುಸಿದು ರೈತರು ಕಂಗಾಲಾಗಿದ್ದಾರೆ. ಇದಕ್ಕೆ ಸರ್ಕಾರ ವಿಶೇಷವಾಗಿ ಮಾನ್ಯ ಕೃಷಿ ಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಮಸ್ಯೆಗೆ ಏನಾದರೂ ಪರಿಹಾರ ಮಾಡಬೇಕು. ದಕ್ಷಿಣದಲ್ಲಿ ಆಲೂಗಡ್ಡೆ ಅಥವಾ ಟೋಮಟೋ ಬೆಲೆ ಕುಸಿದರೆ, ಅದರ ಪರ್ಯಾಯ ವ್ಯವಸ್ಥೆಗೆ ಸರ್ಕಾರ ಮುಂದೆ ಬಂದು ಆ ಪದಾರ್ಥಗಳನ್ನು ಖರೀದಿ ಮಾಡುವುದಕ್ಕೆ ಹೋಗುತ್ತೀರಿ. ಹಾಗೆಯೇ ಇದನ್ನು ಮಾಡಬೇಕು. ಸುಮಾರು 4 ತಿಂಗಳಿಂದ ಗೋವಿನ ಜೋಳದ ಬೆಲೆ 320, 310, 308, 300 ಈ ರೀತಿಯಾಗಿ ಬಹಳ ಹಿಂದೆ ಹೋಗುತ್ತಿದೆ. ಹತ್ತಿ ಸುಮಾರು ಮೂರು ತಿಂಗಳುಗಳಿಂದ ಸ್ಟಾಕ್ ಬಿದ್ದು, ರೈತರಿಗೆ ಹಣ ಸಿಗುತ್ತಿಲ್ಲ. ಹತ್ತಿ ಮಾರಾಟ ಆಗುತ್ತಿಲ್ಲ. ಆದ್ದರಿಂದ ರೈತರು ಕೈಗೆ ಬಂದ ರೇಟಿಗೆ ಹತ್ತಿಯನ್ನು ಮಾರಾಟ ಮಾಡುತ್ತಿದ್ದಾರೆ. ಸರ್ಕಾರ ಏನು ಮಾಡುತ್ತಿದೆ, ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ಏಕೆ ತರುತ್ತಿಲ್ಲವೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಯಾವಗಲ್ ರವರು ಬಹಳ ಮುಖ್ಯವಾದಂಥ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ಕೃಷಿ ರಂಗಕ್ಕೂ ಮತ್ತು ಕೈಗಾರಿಕಾ ರಂಗಕ್ಕೂ ಇರತಕ್ಕಂಥ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಒಂದೆರಡು ಸಲಹೆಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕೈಗಾರಿಕಾರಂಗದಲ್ಲಿ ಉತ್ಪಾದನೆ ಹೆಚ್ಚು ಆದರೆ, ಯಾರು ಉತ್ಪಾದನೆ ಮಾಡುತ್ತಾರೆ ಅವನಿಗೆ ಲಾಭ ಜಾಸ್ತಿಯಾಗುತ್ತದೆ. ಹೆಚ್ಚು ಹೆಚ್ಚು ಉತ್ಪಾದನೆಯಾದಷ್ಟು ಕಾರ್ಖಾನೆಯ ಮಾಲಿಕರಿಗೆ ಲಾಭ ಜಾಸ್ತಿಯಾಗುತ್ತದೆ. ಕೃಷಿ ರಂಗದಲ್ಲಿ ಆ ರೀತಿ ಇಲ್ಲ. ಕೃಷಿ ರಂಗದಲ್ಲಿ ರೈತರು ಹೆಚ್ಚಿಗೆ ಉತ್ಪಾದನೆ ಮಾಡಿದರೆ ಸಂತೋಷವನ್ನು ಪಡುವ ಬದಲು ಕಣ್ಣೀರು ಇಡುವಂಥ ಒಂದು ವಾತಾವರಣದ ಪರಿಸ್ಥಿತಿ ಈ ದೇಶದಲ್ಲಿ ಕಳೆದ ಅನೇಕ ಶತಶತಮಾನಗಳಿಂದ ನಡೆದುಕೊಂಡು ಬಂದಿದೆ. ಆದ್ದರಿಂದ ಅವರು ಹೇಳುವಂಥ ಬೆಂಬಲ ಬೆಲೆ ನಿಗಧಿ ಮಾಡತಕ್ಕಂಥದ್ದು ಅದು ರಾಷ್ಟ್ರೀಯ ಮಟ್ಟದಲ್ಲಿ ಕೆಲವು ಧಾನ್ಯಗಳು ಮತ್ತು ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿಪಡಿಸುತ್ತಾರೆ. ಕರ್ನಾಟಕ ರಾಜ್ಯದ ಯಾವುದೇ ಭಾಗ ಇರಬಹುದು, ಕೃಷಿ ಉತ್ಪಾದನೆಗೆ ನಿಗದಿತ ಬೆಂಬಲ ಬೆಲೆಗಿಂತ ಕಡಿಮೆ ಯಾವುದೇ ಮಾರುಕಟ್ಟೆಯಲ್ಲಿ ಆದು ಮಾರಾಟವಾಗುತ್ತಿದೆ, ಅದನ್ನು ತಡೆಗಟ್ಟುವಂತೆ ಬೆಂಬಲ ಬೆಲೆಗಳು ಬರುವವರೆಗೆ ಇಡುವ ಹಾಗೆ ನೋಡಿಕೊಳ್ಳತಕ್ಕಂಥದ್ದು ಸರ್ಕಾರದ ಕರ್ತವ್ಯ ಕೂಡ ಇದೆ. ನಾನು ತಕ್ಷಣ ವರದಿ ತರಿಸಿ ಮಾರುಕಟ್ಟೆಯಲ್ಲಿರುವ ಬೆಲೆಯ ವರದಿ ತರಿಸಿ ಗೋವಿನ ಜೋಳ, ರಾಗಿ, ಭತ್ತ ಇರಬಹುದು, ಯಾವುದೇ ಕೃಷಿ ಉತ್ಪನ್ನ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿದೆ, ಬೆಲೆ ಸ್ಥಿರೀಕರಿಸತಕ್ಕಂಥ ಕ್ರಮ ತಕ್ಷಣ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದರ ಜೊತೆಗೆ, ಹತ್ತಿಯ ಬಗ್ಗೆ ನಾವು ವಿಧಿಸಿದ ಕೆಲವು ಟ್ಯಾಕ್ಸ್ ಏನು ಇದೆ, ಅದನ್ನು ಯಾವ ಹಂತದಲ್ಲಿ ಟ್ಯಾಕ್ಸ್ ಹಾಕಬೇಕೆಂಬ ಬಗ್ಗೆ ಈ ಹತ್ತಿ ವರ್ತಕರು, ರೈತರು ಮುಷ್ಕರ ಮಾಡುತ್ತಿದ್ದಾರೆ. ಆ ಸಮಸ್ಯೆ ಬಗೆಹರಿದಿದೆ, ಉಪಮುಖ್ಯಮಂತ್ರಿಗಳು ಅದನ್ನು ಬಗೆಹರಿಸಿದ್ದಾರೆ. ಅವರು ನಿಗದಿಪಡಿಸಿರತಕ್ಕಂಥ ಯಾವ ಹಂತದಲ್ಲಿ ಟ್ಯಾಕ್ಸ್ ಹಾಕಬೇಕೆನ್ನುವುದನ್ನು ನಿರ್ಣಯ ಮಾಡಿದ್ದಾರೆ. ಆ ವಿಷಯ ಬಗೆಹರಿದಿದೆ ಎಂದು ನಾನು ಹೇಳುತ್ತೇನೆ, ಅದಕ್ಕೆ ತಿದ್ದುಪಡಿ ಕೂಡ ಆಗಿದೆ. ಹತ್ತಿ ವರ್ತಕರು ಇನ್ನು ಮುಂದೆ ಮುಷ್ಕರ ಹೂಡುವುದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ನಾನು ಸದನದ ಗಮನಕ್ಕೂ ಮತ್ತು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಆ ರೀತಿಯಾಗಿ ಏನಾದರೂ ನಡೆದಿದ್ದರೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರಿಗೆ ತಿಳಿಸಿ ಅದನ್ನು ಯಾವರೀತಿಯಾಗಿ ವ್ಯವಸ್ಥೆ ಮಾಡಬೇಕು ಎನ್ನತಕ್ಕಂಥದ್ದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ) : ತುಂಗಭದ್ರಾ ಎಡದಂಡೆ ಕಾಲುವೆ ನೂರು ದಿನಗಳಲ್ಲಿ ರಿಪೇರಿ ಮಾಡಿ ಮುಗಿಸಬೇಕೆಂದು ಐ.ಸಿ.ಸಿ. ಸಭೆಯಲ್ಲಿ ನಿರ್ಣಯ ಆಗಿತ್ತು. 100ದಿನಗಳಲ್ಲಿ ಮುಗಿಸದ್ದಿದ್ದರೆ ಯಾವ ಕ್ರಾಪ್ ಅಲ್ಲಿ ಬರುವುದಿಲ್ಲ. ನೀರು ಆಗಸ್ಟ್ 15ಕ್ಕೆ ಕೊಟ್ಟರೆ, ರೈತರ ಎರಡು ಬೆಳೆ